VII. ಚಿತ್ರದುರ್ಗ ಡಿ॥ ಲಫೀಸಿಗೆ ಹೊಸದಾಗಿ ಗವರ್ನ್‌ಮೆಂಟಿನಿಂದ ಮಂಜೂರಾಗಿರುವ ಲೋಕಲ್ ಫಂಡು ಗುಮಾಸ್ತೆಯ ಉಪಯೋಗದ ಬಗ್ಗೆ ಒಂದು ಮೇಜು, ಕುರ್ಚಿ, ಪಿರ್ಜಹೋಲ್ ಈ ಮೂರು ಸಾಮಾನುಗಳಿಗೆ ತಗಲತಕ್ಕ 40 ರೂಪಾಯಿಗಳ ಅಂದಾಜಾವನ್ನು ಓದಿ ಅಪ್ರೂವ್ ಮಾಡಲಾಯಿತು.

VIII. ಮಾರಿಕಣಿವೆ ಕೆಲವು ಕಾಲದವರಿಗೆ ಚಿತ್ರದುರ್ಗ ಡಿವಿಜ್ ಎಗ್ಜಿಕ್ಯೂಟಿವ್ ಇಂಜಿನೀರ್ ಸಾಹೇಬರವರ ಹೆಡ್‌ಕ್ವಾರ್ಟರ್ಸಾಗಿರುವುದರಿಂದ ಸದರಿ ಸ್ಥಳದಲ್ಲಿ ಬ್ಯಾರೆ ಯಾವ ಕಟ್ಟಡವು ಮುಸಾಫರುಖಾನೆಯಾಗಿ ಉಪಯೋಗಿಸುವದಕ್ಕೆ ಇಲ್ಲವಾದ ಸಬಬು ಅಸಿಸ್ಟೆಂಟ್ ಇಂಜಿನೀರಿನ ಕ್ವಾರ್ಟರುಗಳ ಪೈಕಿ ಬಂದನ್ನು ಪ್ರಸ್ತುತಕ್ಕೆ ಮುಸಾಫರುಖಾನೆಗೋಸ್ಕರ ತೆಗದುಕೊಳ್ಳಬಹುದಾಗಿರುತ್ತೆಂಬ ವಿಷಯವನ್ನು ತಿಳಿಸುವ ಸೂಪರಿಟೆಂಡಿಂಗ್ ಇಂಜಿನೀರ್ ಸಾಹೇಬರವರಿಂದ ತಲುಪಿದ ಲೆಟರ್ ಓದಿ ರಿಕಾರ್ಡು ಮಾಡಲಾಯಿತು.

IX. ದಾವಣಗೆರೆ ತಾಲ್ಲೂಕು ಬೋರ್ಡು ಉಪಯೋಗದ ಬಗ್ಗೆ 15 ಕುರ್ಚಿಗಳು ಅವಶ್ಯಕವೆಂದು ದಾವಣಗೆರೆ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ತಲ್ಪಿರುವ ಯಾದಿಯನ್ನು ಓದಲಾಯಿತು.

ಅಪ್ರೂವ್ ಮಾಡಿದೆ.—ತಾಲ್ಲೂಕು ಬೋರ್ಡುಗಳ ಉಪಯೋಗದ ಬಗ್ಗೆ ಬೇಕಾಗುವ ಫರ್ನೀಚರ್‌ಗೆ ಬಂದು ಒಟ್ಟು ಲಿಸ್ಟು ತಯಾರ್ಮಾಡಿಸಿ ಅದಕ್ಕೆ ಬೇಕಾಗುವ ಹಣವನ್ನು ಮುಂದಿನ ವರ್ಷದ ಬಡಜಟ್‌ನಲ್ಲಿ ಸೇರಿಸಿ ಮಂಜೂರ್ ಬಗ್ಗೆ ಗವರ್ನ್‌ಮೆಂಟಿಗೆ ಕಳುಹಿಸಬೇಕಾಗಿ ತೀರ್ಮಾನಿಸಲಾಯಿತು.

X. ಹೊಳಲ್ಕೆರೆ ತಾಲ್ಲೂಕಿಗೆ ಹೊಸದಾಗಿ ಮಂಜೂರ್ಮಾಡಿರುವ ಲೋಕಲ್ ಫಂಡ್ ಗುಮಾಸ್ತೆಯ ಉಪಯೋಗದ ಬಗ್ಗೆ ಬೇಕಾದ ಫರ್ನೀಚರ್‌ಗೋಸ್ಕರ ಅಮಲ್ದಾರ್ರಿಂದ ತಲ್ಪಿದ 20 ರೂಪಾಯಿಗಳ ಅಂದಾಜಾ ಓದಲಾಯಿತು.

IXನೆ ಪ್ಯಾರಾಗ್ರಾಫ್‌ನಿನ ರಿಜೊಲ್ಯೂಷ್ಯನ್ ಇದಕ್ಕೆ ಲಗಾವಾಗುತ್ತೆ.

XI. ಹೊಳಕಾಲ್ಮುರುವಿನಲ್ಲಿ ಹಾಲಿ ಇರತಕ್ಕ ಮುಸಾಫರ್‌ಖಾನೆಗೆ ಲಗತ್ತಾಗಿ ಒಂದು ಇನ್‌ಸ್ಪೆಕ್ಷನ್ ಬಂಗ್ಲೆ ಕಟ್ಟಿಸತಕ್ಕ ಬಗ್ಗೆ ಮುಟ್ಟುವ 499 ರೂಪಾಯಿಗಳಿಗೆ ಒಂದು ಅಂದಾಜಾವನ್ನು ಮಂಜೂರ್ ಬಗ್ಗೆ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರವರ 354ನೆ ನಂಬರು ಇತ್ತಿಲ್ಲೆಯೊಂದಿಗೆ ತಲುಪಿರುವದನ್ನು ಓದಲಾಯಿತು.

ಅಪ್ರೂವ್ ಮಾಡಿದೆ—ಚಾಲ್ತಿ ಸಾಲ್ ಬಡ್ಜಟ್‌ನಲ್ಲಿ ಮಂಜೂರ್ಮಾಡಿರುವ ಹಣದ ಪೈಕಿ ಕೊಡಬಹುದಾಗಿ ತೀರ್ಮಾನಿಸಲಾಯಿತು.

XII. ಹೊಸದಾಗಿ ಸ್ಯಾಂಕ್ಷನ್ ಮಾಡಿರುವ ಲೋಕಲ್ ಫಂಡು ಗುಮಾಸ್ತೆ ಮತ್ತು ಪಬ್ಲಿಕ್ ಪ್ರೊಸಿಕ್ಯೂಟರ್ ಮುತ್ಸದ್ದಿ ಇವರ ಉಪಯೋಗದ ಬಗ್ಗೆ ಬೇಕಾಗುವ ಫರ್ನೀಚರ್ ತರಿಸಿಕೊಡಬೇಕಾಗಿ ಹರಿಯೂರು ತಾಲ್ಲೂಕು ಅಮಲ್ದಾರ್ರಿಂದ ತಲ್ಪಿದ ರಿಪೋರ್ಟು ಓದಲಾಯಿತು.

IXನೆ ಪ್ಯಾರಾಗ್ರಾಫ್‌ನಲ್ಲಿ ಮಾಡಿರುವ ತೀರ್ಮಾನವು ಇದಕ್ಕೆ ಲಗಾವಾಗುತ್ತೆ.

XIII. ಬರುವ ಮಿಟಿಂಗ್ 1907ನೆ ಇಸವಿ ಡಿಸೆಂಬರ್ ತಾರೀಖು 21ಕ್ಕೆ ನಡೆಯತಕ್ಕದ್ದೆಂದು ಗೊತ್ತುಮಾಡಲಾಯಿತು.

ಎಂ. ಚಂಗೈಯ್ಯಶೆಟ್ಟಿ,
ಪ್ರೆಸಿಡೆಂಟ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ಯ 1907—08ನೆ ಇಸವಿ ವಿಸ್ ಅರ್ಜೀ ನಂಬರು 305.

ಅರ್ಜೀದಾರರು ಬೆಂಗಳೂರು ತಾಲ್ಲೂಕು ಕೃಷ್ಣರಾಜಪುರದ ಹೋಬಳಿ ರಾಜೇನಹಳ್ಳಿಲಿರುವ ಮುನಿಯಪ್ಪನ ಮಗ ಚನ್ನರಾಯಪ್ಪ ಮೈನರ್, ಗಾರಡಿಯರ್ ಹನುಮಂತರಾಯಪ್ಪ, ಮೈನರಾದ ಚನ್ನರಾಯಪ್ಪನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಚನ್ನರಾಯಪ್ಪನಿಗೆ ಮುಖ್ತ್ಯಾರನಾಮೆದಾರನಾಗಬೇಕೆಂಬ ಹಕ್ಕಿನಮೇಲೆ ರಾಜೇನಹಳ್ಳಿ ಹನುಮಂತರಾಯಪ್ಪನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾನೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ಯ 1907ನೆ ಇಸವಿ ಡಿಸೆಂಬರ್ ತಾರೀಖು 13ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ್ಯ 1907ನೆ ಇಸವಿ ನವಂಬರ್ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1907—08ನೆ ವಿ॥ ಅರ್ಜೀ ನಂಬರ್ 420.

ಬೆಂಗಳೂರು ಸಿಟಿ ಪೊಲೀಸ್ ಇಲಾಖೆಯಲ್ಲಿ 116ನೆ ನಂಬರ್ ಕಾನಿಸ್ಟೇಬಲಾಗಿದ್ದು ಮೃತಪಟ್ಟ ಗಣೇಶರಾವ್ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಅಂಚೆಪೇಟೆಲಿರುವ ಮರಾಟಿಗರ ವೆಂಕಟರಾವ್ ಉರಫ್ ಲಕ್ಷ್ಮಣರಾವು ಮೃತಪಟ್ಟ ಸದರೀ ಗಣೇಶರಾಯರಿಗೆ ಖಾಸ ತಂದೆ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಗಣೇಶರಾವ್ ಜಿಂದಗಿ ಬಗ್ಯಾಗಿ ಬರತಕ್ಕ ಗ್ರಾಂಟು ಬಾಬತು 121—8—0 ರೂಪಾಯಿ ಸಾಲವನ್ನು ವಸೂಲಿ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟ್‌ಗೆ ಪಾಯಿಷ್ ಮಾಡುತ್ತಾರೆ.

ಸದರಿ ದರಖಾಸ್ತುದಾರರಾದ ವೆಂಕಟರಾವ್ ಮತ್ತು ಲಕ್ಷ್ಮಣರಾವ್ ಅರ್ಜಿಯನ್ನು ಸ್ ೧೯೦೭ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತ ಪಟ್ಟ ಗಣೇಶರಾವ್ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೭ನೆ ಇಸವಿ ನವೆಂಬರ್ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೭—೦೮ನೆ ಇ॥ವಿ॥ ಅರ್ಜೀ ನಂಬರು 458.

ಬೆಂಗಳೂರು ನಗರ್ತರಪೇಟೆಲಿದ್ದು ಫವತಿಪಟ್ಟ ಸ್ಪೈರಾಗ್ಯಕೆಟ್ಟರ ಗಡೆದಪ್ಪನವರ ಮಗ ಮರಿಯಪ್ಪನವರ

ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ನಗರ್ತರ ಪ್ಯೂಟೇಲಿರುವ ಮಣಿಗವ್ವ, ಮೃತಪಟ್ಟ ಸದರೀ ಮರಿಯಪ್ಪನವರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಮರಿಯಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 2,800 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಮಣಿಗವ್ವನ ಅರ್ಜಿಯನ್ನು ಸ್ ೧೯೦೭ನೆ ಇಸವಿ ಡಿಸೆಂಬರು ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರಿಯಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೭ನೆ ಇಸವಿ ನವಂಬರ್ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೭—೦೮ನೆ ಇಸವಿ ಮಿ॥ ಅರ್ಜೀ ನಂಬರ್ 453.

ಬೆಂಗಳೂರು ಸಿಟಿ ಮುನಸಿಪಲ್ ತಫೀಸಿನಲ್ಲಿ ಕ್ಲಾರ್ಕ್ ಆಗಿದ್ದು ಮೃತಪಟ್ಟ ಎ. ಶ್ರೀನಿವಾಸಮೂರ್ತಿ

ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರಲ್ಲಿರುವ ಜನರಲ್ ಅಂಡ್ ರವಿನ್ಯೂ ಹೆಡ್ ರಿಕಾರ್ಡ್ಸ್ ಕೀಪರ್ ಮಗಳು ಕಾರೆದಬಾಯಿ ಮೈನರ್, ಗಾರ್ಡಿಯರ್ ಎ. ರಾಜ ರಾವ್, ಮೃತಪಟ್ಟ ಸದರೀ ಎ. ಶ್ರೀನಿವಾಸಮೂರ್ತಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಎ. ಶ್ರೀನಿವಾಸಮೂರ್ತಿಯವರ ಜಿಂದಗಿ ಬಗ್ಯಾಗಿ ಬರತಕ್ಕ 407 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಕಾರಬಾಬಾಯಿ ಮೈನರ್, ಗಾರಡಿಯರ್ ಎ. ರಾಜಾರಾಯರ ಅರ್ಜಿಯನ್ನು ಸ್ ೧೯೦೭ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎ. ಶ್ರೀನಿವಾಸಮೂರ್ತಿಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೭ನೆ ಇಸವಿ ನವೆಂಬರ್ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೭—೦೮ನೆ ಇಸವಿ ಮಿ॥ ಅರ್ಜೀ ನಂಬರ್ 457.

ಬೆಂಗಳೂರು ಗಾಣಿಗಪೇಟೆಲಿ ವಾಸವಾಗಿದ್ದು ಮೃತಪಟ್ಟ ವೆಂಕಟಪ್ಪನ ಮಗಳು ಅಕ್ಕಯಮ್ಮನ

ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಬಿಡಿಕುಳಿದ ಪೇಟೆಲಿ ಇರುವ ವೋಟಪ್ಪನ ಮೊಮ್ಮಗ ಮರಿಯಪ್ಪ, ಮೃತಪಟ್ಟ ಸದರೀ ಅಕ್ಕಯಮ್ಮನಿಗೆ ಖಾಸಾ ಚಿಕ್ಕತಾಯಿ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಅಕ್ಕಯಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ 52—14—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಮರಿಯಪ್ಪನ ಅರ್ಜಿಯನ್ನು ಸ್ ೧೯೦೭ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಕ್ಕಯಮ್ಮನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೭ನೆ ಇಸವಿ ನವೆಂಬರ್ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಜೆ. ಎಸ್. ಭಾಭಾ.
ಸಬ್ ಜಡ್ಜ್.

ಮೈಸೂರು ಸರ್ಟಿಫಿಕೇಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೭—೦೮ನೆ ಇಸವಿ ವಿ॥ ಅರ್ಜೀ ನಂಬರ್ 169.

ಬೆಂಗಳೂರು ಸೆಂಟ್ರಲ್ ನಾಜರ್ ಆಫೀಸಿನಲ್ಲಿ ಅವಿನಾ ಕೆಲಸದಲ್ಲಿದ್ದು ಮೃತಪಟ್ಟ ಬೈರಯ್ಯನವರ

ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ವಂಡಿ ನೊಹಲಾ ದೊಡ್ಡ ಪಕ್ಕಲಗೇರಿಯಲ್ಲಿರುವ ಫವತಿ ಸರ್ವಪ್ಪಾಚೆ ಲಿಂಗಣ್ಣನ ಮಗ ಸರ್ವಪ್ಪಾಚೆ ಕೆಂಪ, ಮೃತಪಟ್ಟ ಸದರೀ ಅವಿನಾ ಬೈರಯ್ಯನವರಿಗೆ ಅಬಿಛಕ್ಕ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇ